ಪ್ರಕಾರ ಮಾಡಬೇಕಾಗುತ್ತದೆ. ಮಾನ್ಯ ಕೃಷ್ಣನ್‌ರವರಿಗೆ ಗೊತ್ತಿದೆ. ಸ್ಯಾಚುಟರಿ ಅಬ್ಲಿಗೇಷನ್ ಏನು ಏನು ಇದೆ ಅನ್ನುವುದು. ಮ್ಯಾನೇಜಮೆಂಟ್‌ನವರು ಇವೆಲ್ಲವನ್ನು ನೋಡಿ ಪರಿಹಾರ ರೂಪದಲ್ಲಿ ಕೊಡುತ್ತಾರೆ ತತ್‌ಕ್ಷಣ ಅನುಕೂಲವಾಗಲಂ ಈ ಹಣವನ್ನ ಕೊಟ್ಟಿದ್ದಾರೆ. ಈ ಸದನದ ಪರವಾಗಿ ನಮ್ಮ ದುಃಖವನ್ನು ಮೃತರ ಬಂಧುಗಳಿಗೆ ತಿಳಿಸಬೇಕಂ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

KARNATAKA CO-OPERATIVE SOCIETIES (2nd AMENDMENT) BILL, 1976

Motion to Consider (Debate Continued)

ಅಧ್ಯಕ್ಷರಂ.—ನಿನ್ನೆದಿವಸ ಮಾನ್ಯ ಉಪಾಧ್ಯಕ್ಷರು ಇವತ್ತು ಈ ಬಿಲ್ಲಿನ ಮೇಲೆ ರಿಪ್ಲೈ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ನನಗೆ ಈ ಬಿಲ್ಲಿನ ಮೇಲೆ ಎರಡಂ ಮಾತನಾಡಲು ಅವಕಾಶ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ.—ಮತ್ತೆ ನನ್ನದೆ ಆದ ಸಹಕಾರ ಸಂಘದ ನಾಲ್ಕನೇ ಅಮೆಂಡ್‌ಮೆಂಟ್ ಬರುತ್ತಿದೆ. ಅವರ ಮೇಲೆ ಮಾನ್ಯ ಶಾಮಣ್ಣನವರು ಮಾತನಾಡಬಹುದು.

ಅಧ್ಯಕ್ಷರು.—ಈಗ ಆಗುವುದಿಲ್ಲ, ಮುಂದೆ ಸಮಯ ಸಿಕ್ಕುತ್ತದೆ ಆಗ ಮಾನ್ಯ ಶಾಮಣ್ಣನವರಂ ಮಾತನಾಡಬಹುದು.

† ಶ್ರೀ ಕೆ ಎಚ್. ರಂಗನಾಥ್.—ಸನ್ಮಾನ್ಯ ಅಧ್ಯಕ್ಷರೇ, ಈ ಸಹಕಾರ ಸಂಘದ ಕಾಯಿದೆಗೆ ತಂದಿರತಕ್ಕಂಥ ೨ನೇ ತಿದ್ದುಪಡಿ ಬಗ್ಗೆ ಒಬ್ಬ ಸದಸ್ಯರ ವಿನಃ ಇನ್ನುಳಿದ ಸದಸ್ಯರೆಲ್ಲರೂ ಅವರ ಉದ್ದಿಶ್ಯ ವನ್ನು ಸ್ವಾಗತಮಾಡಿದ್ದಾರೆ· ಮಾನ್ಯ ಪುಟ್ಟಸ್ವಾಮಿಯವರಂ ೨ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ, ಅದರಲ್ಲಿ ಉದ್ದೇಶಗಳನ್ನು ಸ್ವಾಗತಮಾಡುತ್ತಾ ಕಾರ್ಯಗತಮಾಡುವಾಗ ಅದರಲ್ಲೂ ಕೂಡ ಸೆಕ್ಷನ್ ೧೪ರಲ್ಲಿ ಪುನರ್ ರಚನೆ ಮಾಡುವಾಗ ನಾಮಕರಣ ಮಾಡುವುದು ಏನಿದೆ ಅದರ ಬಗ್ಗೆ ಹೆಚ್ಚು ಜನ ಪ್ರಸ್ತಾಪಮಾಡಿದ್ದಾರೆ. ಇನ್ನು ಮಂಲೆನಾಡಿನಿಂದ ಬಂದಂತಹ ಜನ ಮತ್ತು ಮೈದಾನ ಪ್ರದೇಶದಿಂದ ಬುದಂತಹ ಜನ ಒಂದೊಂದು ರೀತಿಯಲ್ಲಿ ಪ್ರಸ್ತಾಪಮಾಡಿದ್ದಾರೆ ಪುನರ್ ರಚನೆ ಮಾಡುವಾಗ ಒಂದಕ್ಕೊಂದು ಸೊಸೈಟಿಯನ್ನು 10 ಕಿಲೋಮೀಟರ್ ದೂರದವರಿಗೂ ಮಾಡಿದ್ದೀರಿ ಅದು ಹೇಗೆ ? ಎನ್ನುವ ಅಭಿಪ್ರಾಯಂ ವ್ಯಕ್ತಮಾಡಿದ್ದಾರೆ. ಮತ್ತೆ ಕೆಲವರು ಒಳ್ಳೆಯ ಸೊಸೈಟಿಗಳನ್ನು ಲಿಕ್ವಿಡೇಷನ್ ಆಗಿರುವಂತಹ ಸೊಸೈಟಿಗಳಿಗೆ ಸೇರಿಸಿದ್ದೀರಿ ಎಂದು ಕೆಲವರು ಹೇಳಿದ್ದಾರೆ ಅಷ್ಟೇ ಅಲ್ಲದೆ ಅದಕ್ಕೆ ಕಾರಣರಾಗಿದ್ದವರನ್ನು ಕೂಡ ತಾವು ಮತ್ತೆ ನಾಮಕರಣ ಮಾಡಿದ್ದೀರಿ ಎಂದಂ ತಿಳಿಸಿದ್ದಾರೆ. ಇದು ಕೆಲವಾರಂ ಕಡೆ ಆಗಿದೆ ಅದಂ ನನ್ನ ಗಮನಕ್ಕೂ ಕೂಡ ಬಂದಿದೆ. ಇದನ್ನು ಯಾವರೀತಿ ಬಗೆಹರಿಸಬೇಕೆನ್ನುವುದು ಒಂದಂ ವಿಚಾರ. ಡಿಫಂಕ್ಟ್ ಸೊಸೈಟಿಗಳ ಹೆಡ್‌ಕ್ವಾರ್ಟರ್ಸ್ ಇದ್ದಕಡೆಯಲ್ಲೇ ಇಡಬೇಕಾದ ಪರಿಸ್ಥಿತಿ ಬರುತ್ತದೆ. ಡಿಫಂಕ್ಟ್ ಆಯಿತು ಎಂದಂ ಬೇರೆ ಕಡೆಗೆ ಸೇರಿಸುವುದಕ್ಕೆ ಸಾಧ್ಯವಿಲ್ಲ ಹೆಡ್‌ಕ್ವಾರ್ಟರ್ಸ್ ಚೇಂಜ್ ಮಾಡುವುದರಿಂದ ಯಾವ ವ್ಯತ್ಯಾಸವೂ ಆಗ ವುದಿಲ್ಲ. ಒಳ್ಳೆಯ ಸೊಸೈಟಿ ಒಂದು ಮೂಲೆಯಲ್ಲಿ ಇರಬಹುದು. ಇನ್ನು ಪುನರ್ ವಿಂಗಡಿಸಿಮಾಡುವಾಗ ಸೆಕ್ಷನ್ 14 ಮತ್ತು 14(ಎ) ಕಾನೂನಿನಲ್ಲಿ ಕಾಯಿಂ ಆಗಿ ಇರುತ್ತದೆ ಸೆಕ್ಷನ್ (14)ಎ ಕಾನೂನಿಂದ ಹೊರಗೆ ಹೋಗುವುದಿಲ್ಲ. ರಿಜಿಸ್ಟ್ರಾರ್ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ಇರುತ್ತದೆ. ಸರ್ಕಾರಕ್ಕೂ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಹಕ್ಕು ಇರುತ್ತದೆ ಆದರಿಂದ ಈ ಸಭೆಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ನಾಮಿನೇಷನ್ ಬಗ್ಗೆ ತೀವ್ರವಾಗಿ ಪ್ರಸ್ತಾಪಮಾಡಿದ್ದಾರೆ, ಡಿಪಾಲ್ಟ್‌ರ್ಸ್‌ನ್ನು ಪುನಃ ನಾಮಕರಡಿ ಮಾಡಿದ್ದಾರೆ ಕೆಲವರು ಸತ್ತವನನ್ನು ನಾಮಂಕರಣ ಮಾಡಿದ್ದಾರೆ ಜೊತೆಗೆ ಇದೇ ಉದ್ಯೋಗ ಮಾಡಿಕೊಂಡಿದ್ದಾರೆಂದು ಕೂಡ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ.—ಸತ್ತವರನ್ನು ನಾಮಂಕರಣ ಮಾಡಿದ್ದಾರೆಂದು ಅಲ್ಲ. ಎಲ್ಲೋ ಎಲ್ಲೋ ಇದ್ದವರನ್ನು ಒಳಗೆ ಸೇರಿಸಿ ನಾಮಕರಣ ಮಾಡಿದ್ದಾರೆಂದು.

ಶ್ರೀ ಕೆ. ಎಚ್. ರಂಗನಾಥ.—ಈಗ ಸುಮಾರು ೮೨೩೮ ಇದ್ದ ಸೊಸೈಟಿಗಳನ್ನು ೪೧೦ ಸೊಸೈಟಿಗಳನ್ನಾಗಿ ಮಾಡಲಾಗಿದೆ. ಇದರಿಂದ ನೂರಕ್ಕೆ ೫೦ರಷ್ಟು ಕಡಿಮೆ ಮಾಡಿದಂತಾಗಿದೆ. ಇದನ್ನು ೨೦೨೩ ಪುನರ್ ರಚನೆ ಮಾಡಿ ಮಾನ್ಯ ಮುಖ್ಯ ಮಂತ್ರಿಗಳ ಅಪ್ಪಣೆಯನ್ನು ಪಡೆದಿದ್ದೇನೆ. ಇದರಲ್ಲಿ ವ್ಯವಸಾಯ ಸಹಕಾರ ಸಂಘ ಅಂದರೆ ರೈತ ಸಹಕಾರ ಸಂಘವೆಂದು ಆಗಿದೆ. ಒಂದು ಕಡೆ ಸೌತ್ ಕೆನರಾದವರು ಒಂದು ಪುಸ್ತಕ ಪ್ರಿಂಟ್ ಮಾಡಿದ್ದಾರೆ ಅದರಲ್ಲಿ ಪೂರ್ತಿಯಾಗಿ ರೈತ ಸಹಕಾರ ಸಂಘವೆಂದು ಪ್ರಿಂಟ್ ಮಾಡುವುದಕ್ಕೆ ಬದಲಾಗಿ ಆರ್‌ಎಸ್‌ಎಸ್ ಎಂದು ಪ್ರಿಂಟ್ ಮಾಡಿದ್ದಾರೆ. ಅದನ್ನು ಕೂಡಲೇ ಸರಿಮಾಡಿಸಬೇಕೆಂದು ಹೇಳಿದೆ. ಈಗ ಇದಕ್ಕೆ ರೈತ ಸೇವಾ ಸಹಕಾರ ಸಂಘವೆಂದು ಮಾಡಿದ್ದೇವೆ ಆರ್‌ಎಸ್‌ಎಸ್ ಎಂದು ನೋಡಿದ ಕೂಡಲೇ ನನಗೆ ಗಾಬರಿಯಾಯಿತು. ಹೊರಟು ಹೋಗಿರುವ ಪೀಡೆ ಮತ್ತೆ ಬಂತು ಎಂದು ಯೋಚನೆ ಮಾಡಿದೆ ೨೦೨೩ ಸೊಸೈಟಿಗಳಲ್ಲಿ ಒಂದಕ್ಕೆ ೧೦೦ರಂತೆ ಮಾಡಲು ೧೦೦ ಸಾವಿರ ಜನರನ್ನು ನಾಮಕರಣ ಸದಸ್ಯರನ್ನಾಗಿ ಮಾಡಿರುತ್ತಾರೆ ಡಿಫಾಲ್ಟರ್ ಆಗಿರತಕ್ಕಂಥವರು ಮತ್ತು ಸರಕಾರ ಸಂಘವನ್ನು ಉದ್ಯೋಗ ಮಾಡಿಕೊಂಡಿರುವವರು ಉಂಟು ಎಲ್ಲರನ್ನೂ ಸೇರಿಸಿ ಮಾಡಿರಬಹುದು. ಇಂತಹವರ ಸಂಖ್ಯೆ ಎಷ್ಟಾಗಿದೆಯೆಂದು ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಅದರೆ ಅಂತಹ ಡಿಫಾಲ್ಟರ್ಸ್‌ನ್ನು ನಾವು ಹಾಗೆ ಮೂರು ವರ್ಷಗಳು ಕಾಯಂ ಆಗಿ ಇಡುತ್ತಾರೆಂದು ತಿಳಿದುಕೊಳ್ಳಬೇಡಿ. ಅದನ್ನು ಕಂಡು ಹಿಡಿಯಲು ಪೋಲೀಸ್ ಅಧಿಕಾರಿಗಳ ಮತ್ತು ಮತ್ತು ನಮ್ಮ ಅಧಿಕಾರಿಗಳ ಗಮನಾಂತರ ಅವರನ್ನು ಹುಡುಕಿಸುತ್ತೇನೆಂದು ಈ ಸಭೆಯ ಮುಖಾಂತರ ಆಶ್ವಾಸನೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಇನ್ನೊಂದು ಹೆಮ್ಮೆಯ ವಿಷಯ ಏನು ಎಂದರೆ ೯೦ ಸಿರಿಕಲ್ಚರಲ್ ಕೋ ಆಪರೇಟೀವ್ ಸೊಸೈಟಿಗಳಿಗೆ ನಾಮಕರಣ ಮಾಡಿರುತ್ತೇವೆ.

೬೬ ಸಿರಿಕಲ್ಚರಲ್ ಕಂ ಫಾರ್ಮರ್ಸ್ ಸೊಸೈಟಿಗಳನ್ನ ಪ್ರಾರಂಭ ಮಾಡಿದ್ದೇವೆ. ಈ ೩ ಸಹಕಾರ ಸಂಘಗಳನ್ನು ೧೦ ಲಕ್ಷದಿಂದ ೨೫ ಲಕ್ಷ ಜನಸಂಖ್ಯೆಗೆ ಒಳಪಟ್ಟು ಬರುವ ದೃಷ್ಟಿಯಿಂದ ಇದನ್ನು ವ್ಯವಸ್ಥೆಗೊಳಿಸಿದ್ದೇವೆ ಇದರಲ್ಲಿ ನಾಮಕರಣ ಪದ್ಧತಿ ಕ್ರಮ ಬೇರೆಯಾಗಿದೆ ಅಂದರೆ ಸಾದಾರಣವಾಗಿ ಸಣ್ಣ ಹಿಡುವಳಿದಾರನೇ ಈ ಸಂಘಗಳ ಅಧ್ಯಕ್ಷರಾಗಿರುತ್ತಾರೆ. ಸಿರಿಕಲ್ಚರಲ್ ಕಂ ಫಾರ್ಮರ್ಸ್ ಸೊಸೈಟಿ ಮತ್ತು ಫಾರ್ಮರ್ಸ್ ಸೊಸೈಟಿಗಳಲ್ಲಿ ಸಣ್ಣ ಹಿಡುವಳಿದಾರರೇ ಇದರಲ್ಲಿ ಅಧ್ಯಕ್ಷರಾಗಿರುತ್ತಾರೆ. ಫಾರ್ಮರ್ಸ್ ಕೋ ಆಪರೇಟಿವ್ ಸೊಸೈಟಿಯಲ್ಲಿ ೩ ಜನ ಸದಸ್ಯರಿದ್ದರೆ ಅದರಲ್ಲಿ ೫ ಜನ ಸಣ್ಣ ಹಿಡುವಳಿದಾರರು ಇರುತ್ತಾರೆ ಆದರೆ ನಿನ್ನೆ ಮಾನ್ಯ ಮಿತ್ರರಾದ ಮಾತನಾಡುತ್ತಾ ಮತ್ತೆ ನೀವು ದೊಡ್ಡ ದೊಡ್ಡವರ ಕೈಯಲ್ಲಿ ಸೊಸೈಟಿಗಳನ್ನು ಕೊಡುತ್ತಿದ್ದೀರಿ. ಇದರಿಂದ ಎಷ್ಟರ ಮಟ್ಟಿಗೆ ನಿಮ್ಮ ಉದ್ದೇಶ ಸಫಲವಾಗುತ್ತದೆಂದು ಹೇಳಿದರು. ಆದರೆ ಇವತ್ತು ಸಣ್ಣ ಹಿಡುವಳಿದಾರರು, ವೀಕರ್ ಸೆಕ್ಷನ್ ಎನ್ನುವಂಥಾವರೇ ನಾಳೆ ದಿವಸ ಸ್ಟ್ರಾಂಗರ್ ಸೆಕ್ಷನ್ ರವರಾಗಬಹುದು. ಅಲ್ಲಿ ಸಕ್ಕರೆ, ಗೋಧಿ ಮತ್ತು ಫರ್ಟಿಲೈಜರ್ಸ್ ಇರುತ್ತಾರೆ. ಹೀಗಿರುವುದರಿಂದ ಇವತ್ತು ನಾವು ಏನು ವೀಕರ್ ಸೆಕ್ಷನ್ ಎಂದೇ ಹೇಳುತ್ತೇವೆ ಅವರು ನಾಳೆ ದಿವಸ ಸ್ಟ್ರಾಂಗರ್ ಸೆಕ್ಷನ್ ಆಗಬಹುದು. ಅದು ಆಗುವುದಕ್ಕೂ ಸಾಧ್ಯವಿದೆ.

2-00 P.M.

ಮಾನ್ಯ ಅಧ್ಯಕ್ಷರೇ, ಇವತ್ತು ನಾಮಕರಣವಾಗಿರುವ ೩ ಸಹಕಾರ ಸಂಘಗಳಲ್ಲಿಯೂ ಕೂಡ ಅದರ ಕಾಂಪೋಜಿಷನ್‌ನಲ್ಲೂ ಕೂಡ ಒಂದು ನಿಯಮವನ್ನು ಸರ್ಕಾರದವರು ಇಟ್ಟಿದ್ದೇವೆ. ಎಲ್ಲಿ ೫ ಜನ ಸದಸ್ಯರಿರುತ್ತಾರೆ ಅಲ್ಲಿ ೪ ಜನ ದೊಡ್ಡ ಹಿಡುವಳಿದಾರರು ೪ ಜನ ಸಣ್ಣ ಹಿಡುವಳಿದಾರರು ಮತ್ತು ಒಬ್ಬ ಪರಿಶಿಷ್ಟ ವರ್ಗಕ್ಕೆ ಸೇರಿದ ಸದಸ್ಯನಿರುತ್ತಾನೆ. ಒಬ್ಬ ಸದಸ್ಯ ಹರಿಜನ-ಗಿರಿಜನರ ಪರವಾಗಿ ಇರುವುದರಿಂದ ಎಲ್ಲರಿಗೂ ಕೂಡ ಅಲ್ಲಿ ಒಂದು ವ್ಯವಸ್ಥೆ ಮಾಡಿ ಅನುಕೂಲ ಕಲ್ಪಿಸಿ ಕೊಟ್ಟಿದ್ದೇವೆ

ಇನ್ನು ಮಾನ್ಯ ಸದಸ್ಯರು ಡಿಫಾಲ್ಟರ್ಸ್ ಬಗ್ಗೆ ಮಾತನಾಡಿದ್ದರು ಅದರ ಬಗ್ಗೆ ಪೂರ್ಣವಾಗಿ ಪರಿಶೀಲನೆ ಮಾಡಿ, ಆಂಥವರನ್ನು ಅತಿ ಶೀಘ್ರವಾಗಿ ತೆಗೆದು ಹಾಕಿ ಬೇರೆಯವರನ್ನು ನಾಮಕರಣ ಮಾಡುವುದಕ್ಕೆ ನಮ್ಮಲ್ಲಿ ಸಾಕಷ್ಟು ಅಧಿಕಾರವಿದೆ, ಅದುದರಿಂದ ಅದನ್ನು ಮಾಡಿಸುತ್ತೇನೆ ಎನ್ನುವ ಮಾತನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ.—ದೊಡ್ಡ ಹಿಡುವಳಿದಾರರಾಗಿದ್ದವರು ಈಗ ಸಣ್ಣ ಹಿಡುವಳಿದಾರರು ಆಗಿ ಒಡಂತ್ತಾರೆ.

ಕೆ. ಎಚ್. ರಂಗನಾಥ್.—ದೊಡ್ಡ ಹಿಡುವಳಿದಾರರು ಎಂದರೆ ಅಪ್ಪ, ಅಣ್ಣ ಒಟ್ಟಿಗೆ ಇರುತ್ತಾರೆ, ಅಂಥವರು ಡಿವೈಡ್ ಆದಾಗ ಅವರಿಗೆ ಳಿ-ಳಿ ಎಕರೆ ಬರಬಹುದು. ಆವಾಗ ಅವರು ಸಣ್ಣ ಹಿಡುವಳಿದಾರರು ಆಗುತ್ತಾರೆ. ಹಾಗೆ ಒಂದು ವೇಳೆ ೨೦ ಎಕರೆ ಅವನೊಬ್ಬನ ಹೆಸರಿನಲ್ಲಿ ಖಾತೆ ಇದ್ದು ಫಾರ್ಮರ್ ಸೊಸೈಟಿಯಲ್ಲಿ. ಸಿರಿಕಲ್ಚರಲ್ ಅಂಡ್ ಫಾರ್ಮರ್ ಸೊಸೈಟಿಯಲ್ಲಿ ಅಧ್ಯಕ್ಷನಾಗಿದ್ದಾನೆ ಎಂದು ತಾವು ತಿಳಿಸಿದರೆ ತತ್‌ಕ್ಷಣ ಅವನನ್ನು ತೆಗೆದು ಹಾಕುತ್ತೇವೆ. ಅವರು ರಂಗೋಲಿಯೊಳಕ್ಕೆ ನುಸುಳುವುದಕ್ಕೆ ಪ್ರಯತ್ನ ಪಟ್ಟರೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ ಇನ್ನು ಕೆಲವು ಮಿತ್ರರು ಆಡಿಟ್ಟೇ ಆಗಿಲ್ಲ. ಅದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ಹೇಳಿದರು. ಸಣ್ಣ ಪುಟ್ಟವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ, ರಾಜ್ಯ ಮಟ್ಟದಲ್ಲಿರುವ, ಜಿಲ್ಲಾ ಮಟ್ಟದಲ್ಲಿರುವ, ಸಹಕಾರ ಸಂಘಗಳ ಮೇಲೆ, ಬ್ಯಾಂಕ್‌ಗಳ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ ಎನ್ನುವಂಥ ಮಾತನ್ನು ಹೇಳಿದರು. ತಾವು ದಯಮಾಡಿ ಇವತ್ತು ಈ ಸಕ್ಷನ್ ೨೩ನೇ ತಿದ್ದುಪಡಿಯನ್ನು ನೋಡಿದರೆ ಸೆಕ್ಷನ್ ೩೦ (ಎ) ಏನು ಇದೆ ಅದನ್ನು ನಾವು ಇವತ್ತು ಉಪಯೋಗ ಮಾಡಿಕೊಂಡು ೩೩ ಜಿಲ್ಲಾ ಬ್ಯಾಂಕ್‌ಗಳನ್ನು ಸರ್ಕಾರದ ಆಡಳಿತಕ್ಕೆ ತೆಗೆದುಕೊಂಡಿದ್ದೇವೆ. ಅಲ್ಲಿರತಕ್ಕಂಥ ಡೆಪ್ಯುಟಿ ಕಮೀಷನರ್‌ರವರನ್ನೇ ಸ್ಪೆಷಲ್ ಆಫೀಸರನ್ನಾಗಿ ನೇಮಕ ಮಾಡಿದ್ದೇವೆ. ಏತಕ್ಕೆಂದರೆ ಅಲ್ಲೂ ಕೂಡ ಸರಿಯಾದ ವ್ಯವಸ್ಥೆ ಇಲ್ಲದೆ ಇದ್ದುದರಿಂದ ಆ ಒಂದು ವ್ಯವಸ್ಥೆ ಮಾಡಿದ್ದೇವೆ. ಇನ್ನೊಂದು ಅಂಶವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಈಗಾಗಲೇ ಸುಮಾರು ಶೇಕಡ ೮೪ ರಷ್ಟು ಸಹಕಾರ ಸಂಘಗಳಲ್ಲಿ ಆಡಿಟ್ ಆಗಿ ಮುಗಿದಿದೆ. ಆ ರೀತಿ ಆಡಿಟ್ ಮುಗಿಯಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ. ಅದನ್ನು ಎರಡು ಭಾಗ ಮಾಡಬೇಕೆಂದು ತಿಳಿಸಿದ್ದೇವೆ ಒಂದನೇ ಭಾಗ ತಾರ್ಟೇಜ್, ವರ್ಗೈರೆ ಅಂದರೆ ಸಿವಿಲ್ ಲಯಬಿಲಿಟೀಸ್ ಮತ್ತು ಕ್ರಿಮಿನಲ್ ಲಯಬಿಲಿಟೀಸ್ ಎಂದು ಎರಡು ಭಾಗ ಮಾಡಲು ತಿಳಿಸಿದ್ದೇವೆ ಅದರಲ್ಲಿ ಮಿಸ್ ಅಪ್ರಾಪ್ರಿಯೇಷನ್ ಮಾಡಿರುತ್ತಾರೆ, ದುಡ್ಡನ್ನು ತಿಂದಿರುತ್ತಾರೆ ಅದು ಕ್ರಿಮಿನಲ್ ಲಯಬಿಲಿಟೀಸ್ ಕೆಳಗೆ ಬರುತ್ತದೆ. ಹೀಗೆ ಎರಡು ಭಾಗವನ್ನು ಮಾಡಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಅದನ್ನು ರೆಡಿ ಮಾಡಿದ್ದೇವೆ ಅದು ಇನ್ನು ಸ್ವಲ್ಪ ದಿವಸದಲ್ಲಿಯೇ ಅದು ಕೂಡ ಪ್ರಾರಂಭವಾಗಂತ್ತದೆ. ಇಷ್ಟನ್ನು ಹೇಳುತ್ತಾ ದೊಡ್ಡವರನ್ನು ಬಿಟ್ಟು ಬಿಟ್ಟಿದ್ದಾರೆ ಎನ್ನುವಂಥ ಮಾತನ್ನು ಮಾನ್ಯ ಸದಸ್ಯರೊಬ್ಬರು ಹೇಳಿದರು.

ಶ್ರೀ ಕೊಣಂದೂರು ಲಿಂಗಪ್ಪ.— ಭ್ರಷ್ಟಾಚಾರ ಆಗುವುದು ಆಡಿಟ್‌ನಿಂದಲೇ.....

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ನಾನು ಹೋದ ಸಾರಿಯೇ ಬಜೆಟ್ಟಿನ ಮೇಲಿನ ಭಾಷಣ ಮಾಡುವ ಕಾಲಕ್ಕೆ ಆಡಿಟ್ ಡಿಪಾರ್ಟ್‌ಮೆಂಟನ್ನೇ ಪ್ರತ್ಯೇಕ ಮಾಡಿ ಅದನ್ನು ಸರ್ಕಾರದ ನೇರವಾದ ಸಂಬಂಧದಲ್ಲಿಟ್ಟುಕೊಳ್ಳಬೇಕೆಂದು ಮಾಡಿದ್ದೇವೆಂದು ಹೇಳಿದ್ದೆ. ಅದು ಶೀಘ್ರವಾಗಿ ಆಗುತ್ತದೆ. ಅದಾದ ಮೇಲೆ ಇವತ್ತು ಸಹಕಾರ ಸಂಘಗಳಲ್ಲಿ ಏನಾಗಿದೆಯೆಂದರೆ ಆ ಸಂಘದವರಿಗೂ, ಅಧಿಕಾರಿಗಳಿಗೂ ಒಬ್ಬರಿಗೊಬ್ಬರಿಗೂ ಸಂಬಂಧ ಏರ್ಪಡಿಸಿಕೊಂಡು ಬಂದು ಬಿಟ್ಟಿದೆ. ಇವತ್ತು ಅವನ ಮೇಲೆ ಅಪಾದನೆ ಮಾಡಿದರೂ ಕಷ್ಟ ಇಲ್ಲ ಇವನ ಮೇಲೆ ಅಪಾದನೆ ಮಾಡಿದರೂ ಕಷ್ಟ ಹೀಗೆ ಒಬ್ಬರಿಗೊಬ್ಬರಿಗೂ ಸಹಕಾರ ಅಲ್ಲಿ ಬೆಳೆದುಕೊಂಡುಬಂದು ಬಿಟ್ಟಿದೆ. ಅದು ಮಾನ್ಯ ಶ್ರೀ ಸಿ. ಬೈರೇಗೌಡರವರಿಗೂ ಗೊತ್ತು. ಮಾನ್ಯ ಕೊಣಂದೂರು ಲಿಂಗಪ್ಪನವರು ಯಾವ ಬ್ಯಾಂಕ್‌ನಲ್ಲಿಯೂ ಇಲ್ಲವೆಂದು ಕಾಣುತ್ತದೆ. ಆದುದರಿಂದ ಅವರನ್ನು ಯಾವುದಾದರೂ ಒಂದು ಬ್ಯಾಂಕಿಗೆ ಹಾಕೋಣ. ಹೀಗೆ ಅಲ್ಲಿ ಕಾಲಾನುಗತಿಯಿಂದ ಬೆಳೆದುಕೊಂಡು ಬಂದಿರುವುದನ್ನು ಸರಿಪಡಿಸುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಮೊನ್ನೆ ಕೂಡ ನಾವು ಬೆಂಗಳೂರಿನಲ್ಲಿ ಒಂದು ಗೃಹ ನಿರ್ಮಾಣ ಸಂಘವನ್ನು ಸೆಕ್ಷನ ೩೦(ಎ) ಪ್ರಕಾರ ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೇವೆ. ಅಲ್ಲಿ ಕೂಡ ದೊಡ್ಡ ವ್ಯವಹಾರ ನಡೆದಿದೆ ಸುಮಾರು ೮೭ ಲಕ್ಷ ರೂಪಾಯಿಗಳ ವ್ಯವಹಾರ ನಡೆದಿದೆ. ಅದರಲ್ಲಿ ಲೆಕ್ಕಪತ್ರಗಳು ಇಲ್ಲದೇ ಇರತಕ್ಕಂಥದ್ದು ತಿಳಿದುಬಂದು ಸರ್ಕಾರ ಶೀಘ್ರಗತಿಯಲ್ಲಿ ಸೆಕ್ಷನ್ ೩೦(ಎ)ರ ಕೆಳಗೆ ಆಡಿಟ್ ಮಾಡಲು ನೇಮಕ ಮಾಡಿ, ಅದರ ಮೇಲೆ ಏನು ಆ್ಯಕ್ಷನ್ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಆರ್ ಶಾಮಣ್ಣ.—ಅಲ್ಲಿಯ ಶೇರ್ ಹೋಲ್ಡರ್ಸ್‌ಗೆ ಆದಷ್ಟು ಬೇಗ ತಾವು ಪರಿಹಾರವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್ — ಪೇಪರ್‌ನಲ್ಲಿ ಇಂಥ ಸುದ್ದಿ ಬಂತು ಎಂದಾಕ್ಷಣವೇ ಅಲ್ಲಿಗೆ ಜನರು ಬೆಲ್ಲಕ್ಕೆ ನೊಣ ಮುತ್ತಿದ ಹಾಗೆ ಮುತ್ತಿಕೊಂಡು ನಮಗೆ ಹಣವನ್ನು ವಾಪಸ್ಸು ಕೊಡಿಸಿ ಕೊಡಿ ಎಂದರೆ ಹೇಗೆ ? ಇಂಥ ಹಲವಾರು ಹೌಸಿಂಗ್ ಸೊಸೈಟಿಗಳು ನಮ್ಮ ರಾಜ್ಯದಲ್ಲಿ ಇವೆ. ತಮಗೆ ಅಂಕಿ ಅಂಶಗಳನ್ನು ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸುಮಾರು ೨೫೨ ಹೌಸ್ ಬಿಲ್ಡಿಂಗ್ ಸೊಸೈಟಿಗಳು ಇವೆ. ಅದರಲ್ಲೂ ಬೆಂಗಳೂರಿನಲ್ಲಿಯೇ ಸುಮಾರು ೪೨–೪೩ ಇದ್ದಾವೆ ಅದರಲ್ಲಿ ಮಹಾಮಹಿಮರೇ ಇದ್ದಾರೆ. ಇಂಥಾದ್ದೆಲ್ಲಾ ನಮ್ಮ ಗಮನಕ್ಕೆ ಬಂದಿದೆ, ಆದುದರಿಂದ ಅಂಥವುಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಅದರ ಬಗ್ಗೆ ಆಡಿಟ್ ಆಗುತ್ತಿದೆ. ಮಾನ್ಯ ಶ್ರೀ ಶಾಮಣ್ಣನವರಿಗೂ ಅದು ಗೊತ್ತಿದೆ ಏತಕ್ಕೋ ಅವರು ಇದರ ಬಗ್ಗೆ ಇನ್ನೂ ಕಾಗದ ಬರೆದಿಲ್ಲ ಆದರೆ ಇವತ್ತು ಸರ್ಕಾರದವರು ಯಾರೇ ತಪ್ಪು ಮಾಡಿರಲಿ ಅವರನ್ನು ಬಿಟ್ಟು ಬಿಡತಕ್ಕಂಥ ನೀತಿಯನ್ನು ಅನುಸರಿಸುತ್ತಿಲ್ಲ. ಇವತ್ತು ದೊಡ್ಡ ದೊಡ್ಡ ಸಂಸ್ಥೆಗಳಲ್ಲೂ ಕೂಡ ಹಣ ದುರುಪಯೋಗವಾಗುತ್ತಿದೆ ಎನ್ನುವುದು ಕೂಡ ನನಗೆ ಗೊತ್ತಿದೆ, ಅದಕ್ಕೆ ಸಂಬಂಧವಾಗಿ ಸಭೆಯ ಮುಂದಿಟ್ಟಿರತಕ್ಕಂಥ ಕಾನೂನನ್ನು ತಾವು ಗಮನಿಸಿದರೆ ಅದರಲ್ಲಿ ೧೬೬(ಎ) ಇದನ್ನು ತಾವು ಅವಲೋಕಿಸಿ ನುವುದಾದರೆ ಮ್ಯಾನೇಜ್‌ಮೆಂಟಿನವರು ದುರುಪಯೋಗಪಡಿಸಿಕೊಂಡರೆ ಅವರು ೩ ವರ್ಷಗಳವರೆಗೆ ಅಧಿಕಾರ ದಲ್ಲಿರುವ ಹಾಗೆ ಇಲ್ಲ, ಅವರ ಮೇಲೂ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಅಧಿಕಾರಿಗಳಿಗೆ ನಾವು ಸಾಕಷ್ಟು ಅಧಿಕಾರವನ್ನು ಕೊಟ್ಟಿದ್ದೇವೆ. ಅಧಿಕಾರ ಕೊಟ್ಟಾಕ್ಷಣ ಅವರು ಯಾವುದೇ ರೀತಿಯಲ್ಲಿ ಮಂತ್ರಿಸ್ಥಿಕ್ಕೆ ವರ್ತಿಸುವ ಹಾಗಿಲ್ಲ. ಅಪೀಲು, ಪಗ್ಗೆರೆಗೆ ಕೂಡ ಅವಕಾಶ ಮಾಡಿಕೊಟ್ಟಿದ್ದೇವೆ ಆದುದರಿಂದ ಇವತ್ತು ನಾವು ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ ದೊಡ್ಡ ದೊಡ್ಡ ಸಂಸ್ಥೆಗಳ ಬಗ್ಗೆಯೂ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಬರೀ ಸಣ್ಣ ಸಣ್ಣ ಸಂಸ್ಥೆಗಳ ಮೇಲೆ ಮಾತ್ರ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ ಎನ್ನುವ ನಿಮ್ಮ ವಾದ ಅಷ್ಟೊಂದು ಪುಷ್ಟಿಕರವಾದ ವಾದವಲ್ಲ. ಭತ್ತದ ವ್ಯಾಪಾರ ಮಾಡುವ ಸಹಕಾರ ಸಂಘಗಳು ಅಲ್ಲಿ ಇವೆ. ಅವುಗಳು ಯಾರ ಕೈಗೂ ಸಿಕ್ಕದ ಹಾಗೆಲೆಸ ನಡೆಸುತ್ತಿರುತ್ತವೆ. ಅಂಥವುಗಳನ್ನು ಹಿಡಿಯುವುದು ಬಹಳ ಕಷ್ಟ; ಆದರೆ ಇಲ್ಲಿ ನಾವು ಹೇಳುವುದು ಸುಲಭ. ಸಾಮಾನ್ಯವಾಗಿ ಹಳೆ ಭತ್ತ ಮತ್ತು ಹೊಸ ಭತ್ತ ಎಂದು ಎರಡು ವಿಧದ ಭತ್ತಗಳಿವೆ. ಅಲ್ಲದೆ ಹೊಸ ಭತ್ತಕ್ಕೂ ಹಳೆಭತ್ತಕ್ಕೂ ಬೆಲೆಯಲ್ಲಿ ವ್ಯತ್ಯಾಸವಿರುತ್ತದೆ. ಇಂಥಾ ಸನ್ನಿವೇಶವಿರುವಾಗ, ಅವರು ಹಳೆಭತ್ತದ ಚೀಲಕ್ಕೆ ಹೊಸ ಭತ್ತ ಸುರಿದು, ಅದನ್ನು ಹಳೆ ಭತ್ತದ ಬೆಲೆಗೆ ಮಾರುತ್ತಾರೆ. ಆದರೆ, ನಮ್ಮ ಆಡಿಟರ್ ಹೋಗಿ ಏನು ಮಾಡುತ್ತಾನೆ ಎಂದರೆ, ಹೋದ ವರ್ಷ ನೂರು ಚೀಲ ಇತ್ತು, ಈ ವರ್ಷ ಇದೆಯೇ ಎಂಬುದನ್ನು ತನಿಖೆ ಮಾಡಿ, ಇದ್ದರೆ ಸರಿಯಾಗಿದೆ ಎಂದು ಹೇಳಿ ಬಿಡುತ್ತಾನೆ ಈ ರೀತಿ ಮಾಡುವುದರ ಬಗ್ಗೆ ಇಂಡಿಯನ್ ಪೀನಲ್ ಕೋಡಿನಲ್ಲೂ ಒಂದು ಕಲಂ ಇಲ್ಲ. ಇಂಡಿಯನ್ ಪೀನಲ್ ಕೋಡನ್ನು ತಯಾರಿಸುವಾಗ, ಹೀಗೆಲ್ಲಾ ಮುಂದೆ ಆಗಂತ್ತದೆ ಎಂದು ಗೊತ್ತಾಗಿದ್ದರೆ, ಆಗ ಮೊದಲೇ ಇದರ ಬಗ್ಗೆ ಒಂದು ಕಲಂನ್ನು ಸೇರಿಸುತ್ತಿದ್ದರೋ ಏನೋ. ಈ ರೀತಿಯಾದ ಅವ್ಯವಹಾರಗಳು ಸಹಕಾರ ಸಂಘಗಳಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರಿಂದಲೇ, ಅವುಗಳನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರದವರು ತೀವ್ರ ಕ್ರಮ ತೆಗೆದುಕೊಳ್ಳಲು ಅನುಕೂಲವಾಗುವಂಥ ಈ ತಿದ್ದುಪಡಿಯನ್ನು ತಂದಿರುವುದಾಗಿದೆ.

ಮಾನ್ಯ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಎರಡು ಲೀಗಲ್ ಆಸ್ಪೆಕ್ಟ್‌ನ್ನು ಪ್ರಸ್ತಾಪ ಮಾಡಿದ್ದಾರೆ. ಒಂದನೆಯದಾಗಿ, ಸೆಕ್ಷನ್ ೧೪ (ಎ)ನಲ್ಲಿ ''ಫೈನಾನಷಿಯಲ್ ಏಜನ್ಸೀಸ್'' ಎಂದರೆ, ಸೇವಾ ಸಹಕಾರ ಸಂಘಗಳು ಸಾಲ ಕೊಡುವ ಸಂದರ್ಭದಲ್ಲಿ ಜಿಲ್ಲಾ ಬ್ಯಾಂಕುಗಳನ್ನು ಕೇಳುವ ಅವಕಾಶವಿತ್ತು. ಅದನ್ನು ಏತಕ್ಕೆ ಬಿಟ್ಟಿದ್ದೀರಿ ಎಂದು ಕೇಳಿದ್ದಾರೆ. ಎರಡನೆಯದಾಗಿ ಜಿಲ್ಲಾ ಬ್ಯಾಂಕುಗಳನ್ನು ಪುನರ್‌ರಚನೆ ಮಾಡುವಾಗ ರಿಜರ್ವ್ ಬ್ಯಾಂಕಿನ ಕನ್ಸಲ್ಟ್ ತೆಗೆದುಕೊಳ್ಳಬೇಕೆಂಬುದನ್ನು ಬಿಟ್ಟಿದ್ದೀರಿ ಎಂದು ಹೇಳಿದ್ದಾರೆ ಇದು ನಿಜವಾಗಿಯೂ ಸ್ವಾಗತಾರ್ಹವಾದ ವಿಚಾರ. ಇದನ್ನು ನಾವು ಯೋಚನೆ ಮಾಡುತ್ತೇವೆ. ಇನ್ನು ೧೪ (ಎ)ನಲ್ಲಿ ಇದನ್ನು ಏತಕ್ಕೆ ಬಿಟ್ಟಿದ್ದೇವೆ ಎಂದರೆ, ಸಾಮಾನ್ಯವಾಗಿ ಜಿಲ್ಲಾ ಬ್ಯಾಂಕಿನವರು ಸೇವಾ ಸಹಕಾರ ಸಂಘಗಳವರೆಲ್ಲರೂ ಶಾಮೀಲಾಗಿಯೇ ಇರುತ್ತಾರೆ. ನಾವ್ಯು ಇಷ್ಟೊಂದು ದೊಡ್ಡ ಪ್ರಮಾಣ ದಲ್ಲಿರತಕ್ಕ ಸಹಕಾರ ಸಂಘಗಳನ್ನು ಪುನರ್‌ರಚನೆ ಮಾಡುವಾಗ, ಜಿಲ್ಲಾ ಬ್ಯಾಂಕುಗಳನ್ನು ಕೇಳುತ್ತಾ ಕೂತರೆ ಸಾಧ್ಯವೆ ? ಮೂರು ಜಿಲ್ಲಾ ಬ್ಯಾಂಕುಗಳು ಸರಿಯಾಗಿ ಕೆಲಸ ಮಾಡದಿರುವುದರಿಂದಲೇ ಅದನ್ನು ಸರ್ಕಾರ ದವರು ವಶಕ್ಕೆ ತೆಗೆದುಕೊಂಡಿದ್ದಾರೆ. ರಿಜರ್ವ್ ಬ್ಯಾಂಕಿನವರು ಹಾಕಿದ್ದ ನಿಯಮವನ್ನು ಅಲ್ಲಿನ ಆಡಳಿತ ಮಂಡಳಿಯವರು ಮೀರಿದ ಕಾರಣ ಅವನ್ನು ಸರ್ಕಾರದವರು ವಶಕ್ಕೆ ತೆಗೆದುಕೊಂಡಿದ್ದಾರೆ. ಶೀಘ್ರಗತಿ ಯಲ್ಲಿ ಚೆನ್ನಾಗಿ ಕೆಲಸವಾಗಬೇಕೆಂಬ ದೃಷ್ಟಿಯಿಂದ, ೧೪ (ಎ)ನಲ್ಲಿದ್ದ ''ಫೈನಾನಸಿಂಗ್ ಏಜನ್ಸಿ''ಯನ್ನು

ಕನ್ಸಲ್ಟ್ ಮಾಡಬೇಕೆಂಬ ಶಬ್ದವನ್ನು ಬಿಟ್ಟಿದ್ದೇವೆ. ಜಿಲ್ಲಾ ಬ್ಯಾಂಕಂಗಳನ್ನು ಪುನರ್ರಚನೆ ಮಾಡುವಾಗ ರಿಜರ್ವ್ ಬ್ಯಾಂಕಿನವರನ್ನು ಕನ್ಸಲ್ಟ್ ಮಾಡಬೇಕೆಂಬುದನ್ನು ಬಿಟ್ಟುಬಿಟ್ಟಿದ್ದೀರಿ ಎಂದು ಮಾನ್ಯ ಕೆ. ಪುಟ್ಟಸ್ವಾಮಿ ಅವರು ಹೇಳಿದ್ದಾರೆ. ಇದು ಸಾಧುವಾದ ಸಲಹೆ ; ನಾನಿದನ್ನು ಸ್ವಾಗತ ಮಾಡುತ್ತೇನೆ. ಕಾರಣಾಂತರದಿಂದ ಇದು ಕೈಬಿಟ್ಟು ಹೋಗಿದೆಯೇ ಹೊರತು, ಉದ್ದೇಶಪೂರ್ವಕವಾಗಿ ಆಗಿಲ್ಲ. ಇದನ್ನು ಪುನ ಸೇರಿಸಬೇಕೆಂದು ಯೋಚನೆ ಮಾಡಿ, ಅದರ ಬಗ್ಗೆ ಒಂದು ತಿದ್ದುಪಡಿಯನ್ನು ಈಗಲೇ ತರಬೇಕೆಂದು ಪ್ರಯತ್ನ ಮಾಡಿದ್ದೆ. ಆದರೆ ಸೆಕ್ಷನ್ ೧೪ (ಎ) ಕುರಿತು ಒಂದು ರಿಟ್ ಪಿಟಿಷನ್ ಕೋರ್ಟಿನಲ್ಲಿರುವುದರಿಂದ, ಅದು ಸಾಧ್ಯವಾಗಲಿಲ್ಲ. ಮಾನ್ಯ ಸದಸ್ಯರು ಕೊಟ್ಟ ಸಲಹೆಯನ್ನು ನಾನು ಮನಸ್ಸಿನಲ್ಲಿಟ್ಟುಕೊಂಡು, ಅದನ್ನು ಪೂರೈಕೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಗಟ್ಟಿ ಚಂದ್ರಶೇಖರ್‌ರವರು ಬಹಳ ಸ್ವಾರಸ್ಯವಾಗಿ ಮಾತನಾಡಿದ್ದಾರೆ. ಗುಬ್ಬಿ ತಾಲ್ಲೂಕಿನಲ್ಲಿರುವ ಸಹಕಾರ ಸಂಘಗಳಲ್ಲಿ ನಡೆಯುತ್ತಿರುವ ವ್ಯವಹಾರಗಳನ್ನು ಸರ್ಕಾರ ಗಮನಿಸಿದೆ ; ಚೆನ್ನಾಗಿ ತಿಳಿದಿದೆ. ಅವರು ಎಷ್ಟೇ ದೊಡ್ಡ ಮನುಷ್ಯರಾಗಿದ್ದರೂ ನಾನು ಅವರ ಬಗ್ಗೆ ಕ್ರಮ ತೆಗೆದುಕೊಳ್ಳದೇ ಬಿಡುವುದಿಲ್ಲ ; ಈಗಾಗಲೇ ನಾವು ಕ್ರಮ ನಡೆಸುತ್ತಿದ್ದೇವೆ. ಮಾನ್ಯ ಸದಸ್ಯರು ಯಾರನ್ನೂ ಕುರಿತು ಮಾತನಾಡದಿದ್ದರೂ ಕೂಡ, ಅವರ್ಯಾರು ಎಂದು ನನ್ನ ಗಮನಕ್ಕೆ ಬಂದಿದೆ. ಹಿಂದೆಯೇ ಇದರ ಬಗ್ಗೆ ನಾವು ವರದಿ ತರಿಸಿಕೊಂಡಿದ್ದೇವೆ ; ಅದರ ಮೇಲೆ ಕ್ರಮವನ್ನೂ ತೆಗೆದುಕೊಳ್ಳುತ್ತೇವೆ. ನಾವು ಸಾಧ್ಯವಾದ ಮಟ್ಟಿಗೂ ಸಂಧಾರಿಸಿಕೊಂಡು ಬರುತ್ತೇವೆ. ಆದರೆ, ಎಲ್ಲವನ್ನೂ ಒಮ್ಮೆಗೆ ತೆಗೆದುಹಾಕಿಬಿಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಇಂಡಿಯನ್ ಪೀನಲ್ ಕೋಡ್‌ನಲ್ಲಿ ಕೊಲೆ ಮಾಡಿದರೆ ಶಿಕ್ಷೆ ವಿಧಿಸಬೇಕು ಎಂದು ಬರೆದುಕೊಂಡಿದ್ದಾರೆ. ಹಾಗೆಂದಮಾತ್ರಕ್ಕೇ ಕೊಲೆಯಾಗುವುದೇನೂ ನಿಂತಿಲ್ಲವಲ್ಲ ? ಇಂಥವೆಲ್ಲಾ ಸಮಾಜದಲ್ಲಿ ಅವ್ಯಾಹತವಾಗಿ ನಡೆಯುತ್ತಿರುತ್ತವೆ. ನಾವು ಪ್ರಯತ್ನ ಮಾಡಿ ಎಷ್ಟು ಕಡಿವೆಂ ಮಾಡುವುದಕ್ಕೆ ಸಾಧ್ಯವೋ ಅಷ್ಟರಮಟ್ಟಿಗೆ ಕಡಿವೆಂ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತಾ, ಮಾನ್ಯ ಸದಸ್ಯರು ಈ ತಿದ್ದುಪಡಿಗೆ ಅನುಮೋದನೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು, ನನ್ನ ಮಾತನ್ನು ಮುಂಗಿಸುತ್ತೇನೆ.

MADAM SPEAKER —I will put the consideration motion to the vote of the House. The question is :

> "That the Karnataka Co-operative Societies (Second Amendment) Bill, 1976 be taken into consideration".

The motion was adopted

CLAUSE 2

MADAM SPEAKER —I will take up the consideration of the Bill clause by clause. There is an amendment by Sri Shamanna.

SRI T. R. SHAMANNA (Fort).—I beg to move : "That after the proposed Sub-section 1 of Section 14 A the following proviso shall be added :

> "Provided that no such order shall be made except after giving the concerned society or Societies an opportunity of making representation oppposing the amalgamation, division or reorganisation"

MADAM SPEAKER – Amendment moved :

'That after the proposed sub-section 1 of Section 14 A the following proviso shall be added :

'Provided that no such order shall be made except after giving the concerned society or Societies an opportunity of making representation opposing the amalgamation, division or reorganisation ''

† ಶ್ರೀ ಟಿ ಆರ್. ಶಾಮಣ್ಣ. – ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈಗಾಗಲೇ ಈ ಮಸೂದೆ ಬಗ್ಗೆ ಸಾಕಷ್ಟು ಚರ್ಚೆಯಾಗಿ, ಮಾನ್ಯ ಮಂತ್ರಿಗಳೂ ಕೂಡ ಉತ್ತರ ಕೊಟ್ಟಿದ್ದಾರೆ. ಆದರೆ, ಈಗ ಬರುತ್ತಿರುವ ಹೊಸ ಹೊಸ ನಿಬಂಧನೆಗಳನ್ನೂ ಮತ್ತು ಕಾನೂನುಗಳನ್ನು ನೋಡಿದರೆ, ಸಹಕಾರ ಸಂಸ್ಥೆ ಬರುಬರುತ್ತಾ "ಸರ್ಕಾರೀ ಸಂಸ್ಥೆ"ಗಳಾಗುತ್ತಾ ಇವೆಯೆಲ್ಲಾ ಎನ್ನುವ ವ್ಯಾಕುಲ ನನಗಾಗುತ್ತಿದೆ. ಸಹಕಾರ ತತ್ವದ ಪ್ರತಿಪಾದಕರೂ, ಆದರ ಬೋಧಕರುಗಳೂ ಇಂದು ಬದುಕಿದ್ದರೆ, "ಇದೇನಪ್ಪ ಸಹಕಾರ ತತ್ವದ ಪರಿಸ್ಥಿತಿ ಹೀಗಾಗಿದೆ" ಎಂದು ಉದ್ಗಾರವೆತ್ತುತ್ತಿದ್ದರೋ ಏನೋ ಆದರೂ ಕೂಡ, ಇದಕ್ಕೆಲ್ಲಾ ಸರ್ಕಾರವೇ ಪೂರ್ಣ ಜವಾಬ್ದಾರಿ ಎಂದು ನಾನು ಹೇಳುವುದಿಲ್ಲ. ಕೆಲವು ಸಂದರ್ಭಗಳಲ್ಲಿ ನಡೆಯುವ ಅವ್ಯವಹಾರಗಳನ್ನು ಸರಿಪಡಿಸಬೇಕಾದರೆ ಇಂಥಾ ಕ್ರಮಗಳನ್ನೆಲ್ಲಾ ಅವಶ್ಯಕ. ಸರ್ಕಾರದವರು ಎಲ್ಲ ಸಹಕಾರ ಸಂಘಗಳನ್ನೂ ತಮ್ಮ ಹಿಡಿತದಲ್ಲಿಟ್ಟುಕೊಂಡು ಅವುಗಳಲ್ಲಾಗುವ ಅವ್ಯವಹಾರಗಳನ್ನು ತಡೆಗಟ್ಟುವ ಬದಲು, ಸಹಕಾರ ತತ್ವದ ಪ್ರಕಾರ ಸಹಕಾರ ಸಂಘಗಳು ನಡೆಯುವುದಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಂಡು, ಸಹಕಾರ ಸಂಘಗಳು ಯೋಗ್ಯ ರೀತಿಯಲ್ಲಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡುವುದು ಬಹಳ ಒಳ್ಳೆಯದೆಂ

Section 14 (a) Notwithstanding anything contained in this Act or the rules made thereunder and the bye-laws of the Co-operative Societies concerned, where the Registrar is satisfied that it is essential in public interest or in the interest of co-operative movement or for the purpose of securing the proper management of any co-operative society that any two or more co-operative societies should be amalgamated to form a single co-operative society or any co-operative society should be divided or any co-operative society should be reorganised, than the Registrar shall order the amalgamation, division or reorganisation of such co-operative societies ಎನ್ನುವ ನಿಬಂಧನೆ ಇದೆ. ನ್ಯಾಚುರಲ್ ಜಸ್ಟೀಸ್ ಪ್ರಕಾರ ಯಾವುದಾದರೊಂದು ತೀರ್ಮಾನ ತೆಗೆದುಕೊಳ್ಳಬೇಕಾದರೆ, ಮೊದಲು ಅವರಾಧಿಗೆ 'ನೀನು ಮಾಡಿರುವುದು ತಪ್ಪು, ಮುಂದೆ ಇದನ್ನು ನೀನು ತಿದ್ದಿಕೊಳ್ಳಬೇಕು" ಎಂದು ಹೇಳಿ ಒಂದು ನೋಟಿಸ್ ಕೊಡಬೇಕು ಪಾಪಗೆಯೇ, ಸಹಕಾರ ಸಂಘಗಳ ಬಗ್ಗೆಯೂ ಆಷ್ಟೆ ; ಮೊದಲು ಸೂಪರ್‌ಸೀಡ್ ಮಾಡುತ್ತೇನೆ ಎಂದು ಆ ಸಹಕಾರ ಸಂಘಕ್ಕೆ ನೋಟಿಸ್ ಕೊಟ್ಟು, ಅವರಿಂದ ಉತ್ತರ ಪಡೆಯಬೇಕು. ಒಂದು ವೇಳೆ ಆ ಉತ್ತರ ಸಮಾಜಸವಾಗಿಲ್ಲದೆ ಹೋದರೆ, ಆಗ ತೀರ್ಮಾನ ತೆಗೆದುಕೊಳ್ಳುವುದು ಉತ್ತಮವೆಂದು ನನಗೆ ತೋರುತ್ತದೆ ಜಿಲ್ಲಾ ಬ್ಯಾಂಕುಗಳನ್ನು ಪುನರ್ರಚನೆ ಮಾಡುವಾಗ, ರಿಜರ್ವ್ ಬ್ಯಾಂಕಿನವರ ಕನ್ಸಲ್ಟ್ ತೆಗೆದುಕೊಳ್ಳಬೇಕೆಂದಿದ್ದ ನಿಬಂಧನೆಯನ್ನು ಬಿಟ್ಟಿದ್ದಾರೆ. Provided that in the case of a co operative Bank no order under this sub-section shall be made or given effect to without the previous sanction of the Reserve Bank. ಎಂದು ಹೇಳಿದ್ದಾರೆ. ಆದರ ಬಗ್ಗೆ ಕೂಲಂಕುಷವಾಗಿ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿರುವುದು ಬಹಳ ಶ್ಲಾಘನೀಯವಾದುದು. ಮಾನ್ಯ ಸಹಕಾರ ಸಚಿವ ಶ್ರೀ ರಂಗನಾಥರು ಈ ಇಲಾಖೆಯ ಅಧಿಕಾರ ವಹಿಸಿಕೊಂಡ ಮೇಲೆ ಆರೋಪ ಮಾಡುವಂತದ್ದೇನನ್ನೂ ನಾನು ಇಲ್ಲೆ ಕಂಡಿಲ್ಲ. ಅಧಿಕಾರವಿದೆಯೆಂದು, ಅದನ್ನು ಚಲಾಯಿಸಿ, ಸಹಕಾರ

ಸಂಘಗಳನ್ನು ಸೂಪರ್‌ಸೀಡ್ ಮಾಡುವುದು ಅಲ್ಲಿಗೆ ಆಡಳಿತಾಧಿಕಾರಿಯವರನ್ನೋ ಅಥವಾ ವಿಶೇಷಾಧಿಕಾರಿಯನ್ನೋ ನೇಮಕ ಮಾಡುವಂಥ ಕೆಲಸಗಳು ಇವರು ಅಧಿಕಾರ ವಹಿಸಿಕೊಂಡ ನಂತರ ಆಗಿಲ್ಲ. ಒಂದು ವೇಳೆ ಅಂಥವೇನಾದರೂ ನನ್ನ ಗಮನಕ್ಕೆ ಬಂದರೆ, ಮಾನ್ಯ ಮಂತ್ರಿಗಳಿಗೆ ತಿಳಿಸುತ್ತೇನೆ. ಅನೇಕ ಜನ ಮಂತ್ರಿಗಳು, ಸಹಕಾರ ಇಲಾಖೆಯನ್ನು ತಮ್ಮ ಸ್ವಂತ ಆಸ್ತಿ ಎಂದು ತಿಳಿದುಕೊಂಡು ರಾಜಕೀಯ ಕಾರಣಕ್ಕಾಗಲೀ ಅಥವಾ ತಮ್ಮ ಸ್ವಂತ ಕಾರಣಕ್ಕಾಗಲೀ ದುರುಪಯೋಗಪಡಿಸಿಕೊಂಡಿರುವ ನಿದರ್ಶನಗಳು ಇವೆ. ಅದುದರಿಂದ, ಆ ರೀತಿ ಆಗದೇ ಇರಲು, ಮೊದಲು ಅವುಗಳಿಗೆ ಅವಕಾಶ ಕೊಟ್ಟು ಆಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿದ್ದರೆ ತೆಗೆದುಕೊಳ್ಳಬಹುದು. ಹೀಗೆ ಮಾಡಿದರೆ ಬಹಳ ಒಳ್ಳೆಯದೆನ್ನುವುದೇ ನನ್ನ ತಿದ್ದುಪಡಿಯ ಉದ್ದೇಶ.

ಜಾಯಿಂಟ್ ಸ್ಟಾಕ್ ಕಂಪನಿಗಳನ್ನು ತೆಗೆದುಕೊಂಡರೆ ಅಲ್ಲಿ ಅಮಲ್ಗಮೇಷನ್ ಆದ ಪಕ್ಷದಲ್ಲಿ ಅವರು ಒಂದು ಸ್ಪೆಷಲ್ ರೆಸಲ್ಯೂಷನ್ ಅನ್ನು ಮಾಡಬೇಕಾಗುತ್ತದೆ ಸ್ಪೆಷಲ್ ರೆಸಲ್ಯೂಷನ್ ಆಗಬೇಕಾದರೆ ೩/೪ ಭಾಗ ಸದ್ಯರು ಇರಬೇಕು, ಮತ್ತು ೩/೪ ಭಾಗ ಷೇರು ಕ್ಯಾಪಿಟಲ್ ಇರಬೇಕಾಗುತ್ತದೆ. ಕ್ಯಾಪಿಟಲಿಸ್ಟ್ ಕಂಪನಿಗಳಲ್ಲಿ ಇಂಥ ಒಂದು ನಿರ್ಣಯ ಇರುವಾಗ ಜನಗಳ ಸಂಸ್ಥೆಗಳಾದ ಸೊಸೈಟಿಗಳಲ್ಲಿ, ತಾವು ಜನರನ್ನು ಕೇಳದೆ ತಾವು ಸೊಸೈಟಿಗಳನ್ನು ರೀ-ಆರ್ಗನೈಸ್ ಮಾಡುವುದಾಗಲೀ, ಸೊಸೈಟಿಗಳನ್ನು ಅಮಲ್ಗಮೇಟ್ ಮಾಡುವುದಾಗಲೀ ಡಿವಿಷನ್ ಮಾಡುವುದಾಗಲೀ ಅಷ್ಟು ಸರಿಯಾಗಿ ಕಾಣುವುದಿಲ್ಲ ಇಂಥ ಒಂದು ಅಧಿಕಾರವನ್ನು ತಾವು ತಮ್ಮ ರಿಜಿಸ್ಟ್ರಾರ್ ಅವರ ಮುಖಾಂತರ ತೆಗೆದುಕೊಂಡಿದ್ದೀರಿ. ಇದರಿಂದ ತಾವು ಸೊಸೈಟಿಯನ್ನು ಮಲಗಿಸುವಿಕೆಗೆ ಸಂದರ್ಭ ಬರಬಹುದು ಎಂದೂ ನನ್ನ ಅಭಿಪ್ರಾಯ. ಇದನ್ನು ಒಂದು ಸರಿಯಾದಂಥ ರೀತಿಯಲ್ಲಿ ಮಾಡುವುದಾದರೆ ಯಾರಿಗೆ ಇದರಿಂದ ಪೆಟ್ಟು ಬೀಳುತ್ತದೆಯೊ ಅಂಥವರನ್ನು ಒಂದು ಸಾರಿ ಕೇಳಿ ಆಮೇಲೆ ತಾವು ಆರ್ಡರ್ ಮಾಡತಕ್ಕುದು ಕ್ಷೇಮ ಎಂದು ನನಗನ್ನಿಸುತ್ತದೆ, ಈ ಒಂದು ಕಾರಣದಿಂದಲೇ ನಾನು ಈ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಸರ್ಕಾರದವರು ತಮ್ಮ ಈ ಒಂದು ಮಸೂದೆಯನ್ನು ಘನ ಉದ್ದೇಶದಿಂದ ತಂದಿರಬಹುದು. ಆದರೆ ಇದರಿಂದ ಸಾರ್ವಜನಿಕರಿಗೆ ಉಪಯೋಗ ಆಗಬೇಕು. ಸಹಕಾರ ತತ್ವದಲ್ಲಿ ನಂಬಿಕೆಯಿಟ್ಟು ಸಹಕಾರ ತತ್ವದ ಪ್ರಕಾರ ಸಹಕಾರ ಸಂಘಗಳನ್ನು ನಡೆಸುವುದಕ್ಕೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದಕ್ಕೆ ವಿವರಣೆಯನ್ನು ತಾವು ಕೊಟ್ಟರೆ ನಾನು ಸಂತೋಷಪಡುತ್ತೇನೆ ತಾವು ತಂದಿರುತಕ್ಕ ತಿದ್ದುಪಡಿಯಿಂದ, ಒಂದು ಸೊಸೈಟಿಯನ್ನು ಪೂರ್ಣವಾಗಿ ಮಲಗಿಸಬಹುದು, ಮತ್ತು ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡತಕ್ಕ ಒಂದು ಅಧಿಕಾರವನ್ನು ತಾವು ಇಟ್ಟುಕೊಂಡಿರುವುದರ ಮೂಲಕ ಇಡೀ ಸೊಸೈಟಿಯ ಆಡಳಿತವನ್ನು ಸರ್ಕಾರದವರೇ ತೆಗೆದುಕೊಂಡಂತಾಗುತ್ತದೆ ಯಾರಾದರೂ ಸೊಸೈಟಿಯಲ್ಲಿ ಖಿದೀಮರು ಇದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ತಾವು ತಂದಿರುತಕ್ಕ ತಿದ್ದುಪಡಿ ಸಹಾಯಕವಾಗುತ್ತದೆಂದು ಹೇಳಬಹುದು, ಆದರೆ ಕೆಲವರನ್ನು ಅನ್ಯಾಯವಾಗಿಯೂ ಮನೆಗೆ ಕಳುಹಿಸತಕ್ಕ ಪರಿಸ್ಥಿತಿ ಬರುತ್ತದೆ ಎನ್ನುವುದನ್ನು ತಾವು ತಿಳಿಯಬೇಕು ಈ ಬಿಲ್ಲಿನಲ್ಲಿ ಅಪೀಲ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಆದರೆ ತಾವು ಸಹಕಾರ ಸಂಘಗಳನ್ನು ಪೂರ್ಣವಾಗಿ ತಮ್ಮ ವಶಕ್ಕೆ ತೆಗೆದುಕೊಳ್ಳತಕ್ಕದ್ದರ ಬಗ್ಗೆ ತಾವು ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವರ ಬಗ್ಗೆ ನನಗೆ ಕಳವಳವಾದ್ದರಿಂದ ನಾನು ಈ ತಿದ್ದುಪಡಿಯನ್ನು ತರಬೇಕಾಗುತ್ತದೆ. ಈ ನನ್ನ ತಿದ್ದುಪಡಿಯನ್ನು ತಾವು ಒಪ್ಪಿಕೊಳ್ಳುವುದರಿಂದ ಸರ್ಕಾರಕ್ಕಾಗಲೀ ಸಹಕಾರ ತತ್ವಕ್ಕಾಗಲೀ, ಯಾವ ವಿಧದಿಂದಲೂ ತೊಂದರೆಯಾಗುವುದಿಲ್ಲ ಈ ಸಂದರ್ಭದಲ್ಲಿ ತಾವು ರಿಜಿಸ್ಟ್ರಾರ್ ಅವರು ಸ್ಯಾಟಿಸ್‌ಫೈ ಆದಮೇಲೆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡುತ್ತೇವೆಂದು ಹೇಳಬಹುದು. ಆದರೆ ರಿಜಿಸ್ಟ್ರಾರ್ ಅವರನ್ನೂ ಕೇಳದೇ, ಬೇರೆ ಕಾರಣಗಳಿಂದ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿರತಕ್ಕ ನಿದರ್ಶನಗಳೂ ಇರುವುದರಿಂದ ನನ್ನ ತಿದ್ದುಪಡಿಯನ್ನು ಇಲ್ಲಿ ಸಮರ್ಥನೆ ಮಾಡಬೇಕಾಗಿದೆ. ತಾವು ಅಧಿಕಾರಕ್ಕೆ ಬಂದಮೇಲೆ ಅಂಥ ಆರೋಪಗಳನ್ನು ಹೇಳುವುದಕ್ಕೆ ಶಕ್ತಿಯಿಲ್ಲ ಎಂದು ನಾನಾಗಲೇ ಹೇಳಿದ್ದೇನೆ. ತಾವು ಆ ಮಾಡಿದ ಮೇಲೆ ಅದನ್ನು ಉಪಯೋಗಿಸತಕ್ಕ ರೀತಿ ಯಾವರೀತಿ ಆದರೂ ಆಗಬಹುದು. ಆದ್ದರಿಂದ ತಾವು ಇವರಿಗೆ ಸಾಕಷ್ಟು ಅವಕಾಶ ಕೊಟ್ಟು ನ್ಯಾಚುರಲ್ ಜಸ್ಟೀಸ್ ಪ್ರಕಾರ ಅವರ ಒಂದು ಅಭಿಪ್ರಾಯವನ್ನು ತಾವು ತೆಗೆದುಕೊಳ್ಳಬೇಕು ಜನರಿಗೆ ಸರಿಯಾದ ನ್ಯಾಯ ದೊರಕಿಲ್ಲ ಎಂದು ಹೇಳುವುದಕ್ಕೆ ಅವಕಾಶ ಮಾಡಿಕೊಡಿ ತಮ್ಮ ಒಂದು ತಿದ್ದುಪಡಿಯಿಂದ ಹೆಚ್ಚಿನ ತೊಂದರೆಯಾಗುತ್ತದೆಂದು ತಿಳಿದು ನನ್ನ ಒಂದು ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ ಎಚ್. ರಂಗನಾಥ್.—ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶಾಮಣ್ಣನವರು ವಕೀಲರಾಗಿದ್ದರೆ ಬಹಳ ಜೆನ್ನಾಗಿತ್ತು, ಅವರು ತಂದಿರತಕ್ಕ ತಿದ್ದುಪಡಿಯಲ್ಲಿ ಮೇಕಿಂಗ್ ರೆಪ್ರಸೆಂಟೇಷನ್ ಎಂದೂ

ಮಾತ್ರ ಇದ್ದಿದ್ದರೆ ಏನಾದರೂ ಸ್ವಲ್ಪ ನಾನು ಹೇಳಬಹುದಾಗಿತ್ತು. ಆದರೆ ಅವರು 'ಅಪೋಸಿಂಗ್ ಫಾರ್ ಅಮಾಲ್ಗಮೇಷನ್'' ಮತ್ತು ''ರೀ ಆರ್ಗನೈಜೇರ್ಷ'' ಎಂದು ಏನು ಹಾಕಿದ್ದಾರೆ ಆ ರೀತಿ ಇರುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಇವರು ''ಅಮಾಲ್ಗಮೇಷನ್'' ''ರೀ-ಆರ್ಗನೈಜೇರ್ಷ'' ಮತ್ತು ''ಡಿವಿಷನ್'', ಅನ್ನು ಅಪೋಸ್ ಮಾಡುವುದಾದರೆ, ನಾನು ಸೆಕ್ಷನ್ ೧೪ (ಎ) ಅನ್ನೂ ಏಕೆ ತರಬೇಕು ? ಇದಕ್ಕೆ ಅವಶ್ಯಕತೆ ಇರಲಿಲ್ಲ. ಸೆಕ್ಷನ್ ೧೪ ಇದ್ದೇ ಇದೆ. ಆದರೂ ೧೪ (ಎ) ಅನ್ನು ಹೊಸದಾಗಿ ತಂದಿದ್ದೇವೆ. ಸೆಕ್ಷನ್ ೧೪ರಲ್ಲಿ ಯಾವುದಾದರೂ ಸೊಸೈಟಿಯು ಬೇರೆ ಆಗುವುದಾದರೆ ಮತ್ತು ಸೇರ್ಪಡೆಯಾಗಬೇಕಾದರೆ, ಅಲ್ಲಿರತಕ್ಕ ಎರಡು ಸೊಸೈಟಿಗಳು ತಮ್ಮ ತಮ್ಮ ಜನರಲ್ ಬಾಡಿಯಲ್ಲಿ 2/3 ಭಾಗ ಬಹುಮತ ಪಡೆದು ಸೇರ್ಪಡೆಯಾಗುವುದಕ್ಕೋ ಬೇರೆ ಬೇರೆಯಾಗುವುದಕ್ಕೋ ಅವಕಾಶ ಇದೆ. ಆದ್ದರಿಂದಲೇ ನಾವು ಸೆಕ್ಷನ್ ೧೪ ಅನ್ನು ಉಳಿಸಿಕೊಂಡಿದ್ದೇವೆ ೧೩ (ಎ) ಅನ್ನು ಹೊಸದಾಗಿ ತಂದಿದ್ದೇವೆ ಇದರಲ್ಲಿ ನಾವು ಒಂದು ಹೊಸ ವಿಚಾರವನ್ನು ಜಾರಿಗೆ ಕೊಟ್ಟಿದ್ದೇವೆ. ಯಾರಿಗೆ ಸಹಕಾರ ಸಂಘಗಳಲ್ಲಿ ಬಹು ದಿವಸಗಳಿಂದ ಅನುಕೂಲ ದೊರೆಯದೆ ಬಹುದೂರ ಇದ್ದರೋ ಅವರಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಸೆಕ್ಷನ್ ೧೪ (ಎ) ಅನ್ನು ತಂದಿದ್ದೇವೆ. ಮಾನ್ಯ ಶಾಮಣ್ಣನವರು ತಂದಿರತಕ್ಕ ಅಮೆಂಡ್‌ಮೆಂಟ್ ಅನ್ನು ಸ್ವೀಕರಿಸಿಬಿಟ್ಟರೆ ಇದೆಲ್ಲಾ ಸಾಧ್ಯವಾಗುವುದಿಲ್ಲ. ಈಗ ಸೆಕ್ಷನ್ ೩೦ (ಎ) ಇದೆ, ಹೌಸಿಂಗ್ ಸೊಸೈಟಿಯಲ್ಲಿ ೦೭ ಲಕ್ಷ ರೂಪಾಯಿಗಳ ಅವ್ಯವಹಾರ ನಡೆದಾಗ ಸರ್ಕಾರದವರು ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು ಸೆಕ್ಷನ್ ೩೦ (ಎ) ಇಲ್ಲದೇಹೋಗಿದ್ದರೆ ಇಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಸಾಧ್ಯವಾಗುತ್ತಿರಲಿಲ್ಲ. ಈ ದೃಷ್ಟಿಯಿಂದ ನಾವು ಸೆಕ್ಷನ್ ೧೪ ಅನ್ನು ಮತ್ತು ಇದರ ಜೊತೆಗೆ ಸೆಕ್ಷನ್ ೩೦ ಅನ್ನೂ ಹಾಗೆಯೇ ಇಟ್ಟುಕೊಂಡಿದ್ದೇವೆ. ಇವತ್ತು ಮಾನ್ಯ ಸದಸ್ಯರು ಮಾತನಾಡುತ್ತಾ ಸಹಕಾರ ಸಂಘಗಳು ಸರ್ಕಾರಿ ಸಂಘಗಳಾಗಿವೆ ಎಂದು ಹೇಳಿದರು. ಇದರ ಬಗ್ಗೆ ನಾನು ಸಭೆಗೆ ವಾಸ್ತವಾಂಶವನ್ನು ಹೇಳುವುದಾದರೆ ಸರ್ಕಾರದವರು ಸಹಕಾರಿ ಕ್ಷೇತ್ರಕ್ಕೆ ಸುಮಾರು ೨೧೯ ಕೋಟಿ ರೂಪಾಯಿಗಳ ಗ್ಯಾರಂಟಿಯನ್ನು ಕೊಟ್ಟಿದ್ದೇವೆ, ಸುಮಾರು ೪೩ ಕೋಟಿ ರೂಪಾಯಿಗಳನ್ನು ಷೇರು ಬಂಡವಾಳ ರೂಪದಲ್ಲಿಯೂ ಮತ್ತು ಮಂತ್ರಿತರ ಸಹಾಯಧನ ರೂಪದಲ್ಲಿ ಈ ಸಹಕಾರ ಕ್ಷೇತ್ರದಲ್ಲಿ ಸರ್ಕಾರದವರು ತೊಡಗಿಸಿದ್ದೇವೆ. ಆದ್ದರಿಂದ ಸರ್ಕಾರದ ಜವಾಬ್ದಾರಿ ಸಹಕಾರಿ ಕ್ಷೇತ್ರದಲ್ಲಿ ಹೆಚ್ಚಾಗಿಯೇ ಹೊರತು ಕಡಿಮೆಯಾಗಿದೆಯೆಂದು ಯಾರೂ ಭಾವಿಸಬಾರದು. ಹಿಂದೆ ಸ್ವಪ್ರೇರಣೆಯಿಂದ ಸಹಕಾರ ಸಂಘಗಳನ್ನು ಮಾಡಿಕೊಂಡು ಸರ್ಕಾರವನ್ನು ಅವಲಂಭಿಸದೆ ತಮ್ಮ ಹಣವನ್ನು ಸಂಘಗಳಲ್ಲಿ ವಿನಿಯೋಗಿಸಿ ಅನುಕೂಲ ಮಾಡಿಕೊಳ್ಳುತ್ತಿದ್ದರು ಆಗ ಸರ್ಕಾರದವರೂ ಸಹ ಅವರ ಹತ್ತಿರಕ್ಕೆ ಹೋಗುತ್ತಿರಲಿಲ್ಲ. ಆದರೆ ಇವತ್ತು ಸಹಕಾರಿ ಕ್ಷೇತ್ರದಲ್ಲಿ ನಾವು ಸುಮಾರು ೨೧೯ ಕೋಟಿ ರೂಪಾಯಿಗಳ ಗ್ಯಾರಂಟಿಯನ್ನು ಕೊಟ್ಟಿದ್ದೇವೆ, ಅಲ್ಲದೆ ೪೩ ಕೋಟಿ ರೂಪಾಯಿಗಳನ್ನು ತೊಡಗಿಸಿದ್ದೇವೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರಕ್ಕೆ ಇವುಗಳ ಮೇಲೆ ಅಧಿಕಾರ ಇಲ್ಲದೆ ಇದ್ದರೆ ಆಡಳಿತದಲ್ಲಿ ಬಿಗಿ ತಪ್ಪುತ್ತದೆ, ಈ ದೃಷ್ಟಿಯಿಂದ ನಾವು ಕೆಲವೊಂದು ಕಾರ್ಯಕ್ರಮಗಳನ್ನು ತೆಗೆದುಕೊಂಡು ಬರಬೇಕಾಗಿದೆ. ಆ ಪ್ರಕಾರ ಈ ತಿದ್ದುಪಡಿಯನ್ನು ತಂದಿದ್ದೇವೆ. ಮಾನ್ಯ ಸದಸ್ಯರು ಇದೆಲ್ಲವನ್ನು ಮನಗಂಡು ನಮ್ಮ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

SRI T. R. SHAMANNA.—I agree to omit "opposing the amalgamation, division. or reorganisation'' from my amendment, Anyway, I press for the amendment.

MADAM SPEAKER.—I will put the amendment to the vote of the House.

The question is :

"That after the proposed sub-section (1) of Section 14A, the following proviso shall be added :

Provided that no such order shall be made except after giving the concerned Society or Societies an opportunity of making representation opposing the amalgamation, division or reorganisation''

The Amendment was negatived

MADAM SPEAKER —The question is :

"That Clause 2 do stand part of the Bill''.

The motion was adopted

Clause 2 was added to the Bill

CLAUSES 3 TO 9

MADAM SPEAKER —The question is :

"That Clause 3 to 9 both inclusive, do stand part of the Bill''.

The motion was adopted

Clauses 3 to 9, both inclusive, were added to the Bill

CLAUSE 1, ETC

MADAM SPEAKER —The question is:

"That the long Tittle, the Preamble and the Enacting Formula do stand part of the Bill."

The motion was adopted

The long Title, the Preamble and the Enacting Formula were added to the Bill.

Motion to pass

SRI K H. RANGANATH.—I beg to move:

"That the Karnataka Co-operative Societies (Second Amendment) Bill, 1976, be passed "

MADAM SPEAKER.—The question is:

"That the Karnataka Co-operative Societies (Second Amendment) Bill, 1976 be passed."

The Motion was put and adopted and the Bill was passed.

2-30 P.M.

KARNATAKA STATE UNIVERSITIES (AMENDMENT) BILL, 1976.

Motion to Consider

SRI S.M. YAHYA Minister for University Education and Excise).—I beg to move:

' That the Karnataka State Universities (Amendment) Bill, 1976 be taken into consideration.''